ಸಾಹಿತ್ಯ, ಕಲೆ, ಸಂಸ್ಕೃತಿ, ರಂಗಭೂಮಿ, ಜನಪದ, ಶಿಕ್ಷಣ ಹೀಗೆ ಹಲವಾರು ಕ್ಷೇತ್ರಗಳ ಜೊತೆಗೆ ಪರಿಸರ ರಕ್ಷಣೆ ಹಾಗೂ ಸಮಾಜಕ್ಕೆ ನಿಸ್ವಾರ್ಥ ಸೇವೆ ಸಲ್ಲಿಸುವುದು ಪ್ರತಿಷ್ಠಾನದ ಮುಖ್ಯ ಉದ್ದೇಶ. ಈ ಉದ್ದೇಶದೊಂದಿಗೆ ೨೦೧೬ ರಿಂದ ಕಾರ್ಯ ಪ್ರವೃತ್ತವಾದರೂ ೨೦೧೮ ಡಿಸೆಂಬರ್ ೪ ರಂದು ಭೂಮಿ ಪ್ರತಿಷ್ಠಾನವು ನೋಂದಣಿಯಾಗಿದೆ.

'ಭೂಮಿಯು ಎಲ್ಲರಿಗಾಗಿ ಎಲ್ಲರೂ ಭೂಮಿಗಾಗಿ' ಇದು ಪ್ರತಿಷ್ಠಾನದ ಧ್ಯೇಯ ವಾಕ್ಯ. 'ಅಕ್ಷರ ಕ್ರಾಂತಿಯ ಜೊತೆಗೆ ವೃಕ್ಷ ಕ್ರಾಂತಿ. ನುಡಿ ಸೇವೆಯ ಜೊತೆಗೆ ನಾಡಿನ ಸೇವೆ' ಎಂಬ ದೂರದೃಷ್ಟಿಯೊಂದಿಗೆ ನಿಸ್ವಾರ್ಥ ಹಾಗೂ ಪ್ರಾಮಾಣಿಕ ಸೇವೆಯ ಸಾಮಾಜಿಕ ಕಳಕಳಿಯುಳ್ಳ ಸಂಘಟನೆಯೇ ನಮ್ಮ ಸಾಮರ್ಥ್ಯ. ಭೂಮಿಯ ರಕ್ಷಣೆ ಪರಮ ಗುರಿ. ಭೂಮಿ ಮೇಲೆ ವಾಸಿಸುವ ಸರ್ವರಿಗೂ ಸಮನಾದ ಅವಕಾಶ ನೀಡುವುದು. ಹಲವಾರು ರಂಗಗಳಲ್ಲಿ ಪ್ರತಿಭಾವಂತ ಸೃಜನಶೀಲ ಮನಸ್ಸುಗಳಿಗೆ ವೇದಿಕೆಯನ್ನು ಕಲ್ಪಿಸಿಕೊಡಬೇಕೆಂಬ ಉದ್ದೇಶಗಳನ್ನು ಹೊಂದಿ ಈಗಾಗಲೇ ಮೂರು ವರ್ಷಗಳಿಂದ ಹಲವಾರು ಸದಭಿರುಚಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಸಮಾಗಮ, ಅರಿವಿನ ಪಯಣ, ಹಸಿರು ಭೂಸಿರಿ, ಧರಣಿಮಂಡಲ ಹೀಗೆ ಹಲವು ಕಾರ್ಯಕ್ರಮಗಳಿಗೆ ಉತ್ತಮ ಪ್ರತಿಕ್ರಿಯೆ ದೊರೆತ ಕಾರಣ ಈಗ 'ಪುನರ್ನವ' ಎಂಬ ಸಂಶೋಧನಾ ನಿಯತಕಾಲಿಕೆ ಹೊರತರಲು ಸರ್ವ ರೀತಿಯ ಪ್ರಯತ್ನಗಳು ಯೋಜಿತ ರೀತಿಯಲ್ಲಿ ನಡೆಯುತ್ತಿದೆ. ಇಂತಹ ಪ್ರಯತ್ನಗಳಿಗೆ ಮುನ್ನುಡಿಯೇ 'ಪುನರ್ನವ' ರಾಷ್ಟ್ರೀಯ ವಿಚಾರ ಸಂಕಿರಣ. ಒಟ್ಟಾರೆ ಸೃಜನಶೀಲ ಮನಸ್ಸುಗಳನ್ನು ಒಗ್ಗೂಡಿಸುವ ಕನಸು ನಮ್ಮದು.

ಸೃಜನಶೀಲರು, ಸಾಹಿತ್ಯಾಸಕ್ತರು, ಸಂಸ್ಕೃತಿ ಆರಾಧಕರು, ಪರಿಸರ ಪ್ರಿಯರು ಹಾಗೂ ಸಹೃದಯ ಆಸಕ್ತರಿಗೆ ಭೂಮಿ ಪ್ರತಿಷ್ಠಾನದ ಸದಸ್ಯರಾಗಲು ಮುಕ್ತ ಅವಕಾಶ ಕಲ್ಪಿಸಲಾಗಿದೆ. ತಾವು ನಮ್ಮ ಜೊತೆಗೆ ಈ ಸೇವೆಯಲ್ಲಿ ಕೈಜೋಡಿಸುವಿರೆಂದು ಭಾವಿಸಿದ್ದೇವೆ. ಬನ್ನಿ ನಾವೆಲ್ಲರೂ ಭೂಮಿಯ ಸೇವೆಗೆ ಒಂದಾಗೋಣ.

– ಭೂಮಿ ಪ್ರತಿಷ್ಠಾನ, ಧಾರವಾಡ




Principal
S. V. M. Arts and Commerce
Women's College, ILKAL

ಭೂಮಿ ಪ್ರತಿಷ್ಠಾನ
ಧಾರವಾಡ

ಬೆಲೆ : 250/-

ISBN 978-81-949100-2-2
9 788194 910022



# ಪುನರ್ನವ

ಭಾಗ ೬

S. V. M. ARTS & COMMERCE WOMEN'S COLLEGE ILKAL 587125

ಸಂಪಾದಕರು
ಡಾ. ಶಿವಾನಂದ ಬ. ಟವಳಿ

**ಪುನರ್ನವ** ಭಾಗ-೬

| | | |
|---|---|---|
| ಸಂಪಾದಕರು | : | ಡಾ. ಶಿವಾನಂದ ಬ. ಟವಳಿ<br>ಅಧ್ಯಾಪಕರು, ಕನ್ನಡ ವಿಭಾಗ, ಜೆ.ಎಸ್.ಎಸ್. ಮಹಾವಿದ್ಯಾಲಯ,<br>ವಿದ್ಯಾಗಿರಿ, ಧಾರವಾಡ-೦೪ ದೂ.ಸಂ. ೯೮೪೪೦೩೫೭೮೮ |
| ಪ್ರಕಾಶಕರು | : | **ಭೂಮಿ ಪ್ರತಿಷ್ಠಾನ, ಧಾರವಾಡ**<br>ಸಾ॥ ಬಮ್ಮಿಗಟ್ಟಿ, ತಾ॥ ಕಲಘಟಗಿ<br>ಜಿ॥ ಧಾರವಾಡ- ೫೮೧೨೦೪ ದೂ.ಸಂ. ೯೭೩೮೬೬೪೮೭೭ |
| ಮೊದಲ ಮುದ್ರಣ | : | ಡಿಸೆಂಬರ್ ೨೦೨೧ |
| ಪುಟಗಳು | : | x + ೧೬೬ |
| ಪ್ರತಿಗಳು | : | ೧೦೦೦ |
| ಹಕ್ಕುಗಳು | : | ಪ್ರಕಾಶಕರು |
| ಬಳಸಿದ ಕಾಗದ | : | ೮೦ ಜಿ.ಎಸ್.ಎಮ್. |
| ಬೆಲೆ | : | ರೂ. ೨೫೦/- |
| ಮುಖಪುಟ ವಿನ್ಯಾಸ | : | ಶ್ರೀ ರವಿ ಗೋವನಕೊಪ್ಪ |
| ಒಳಪುಟ ವಿನ್ಯಾಸ | : | ಶ್ರೀಮತಿ ಮಂಜುಳಾ ಶಿವಾನಂದ |
| ಮುದ್ರಕರು | : | ಬಿ.ಜಿ. ಪ್ರಿಂಟರ್ಸ್, ಧಾರವಾಡ ೯೮೪೫೨ ೭೦೧೧೪ |

**PUNARNAVA Part-6**

| | | |
|---|---|---|
| Editors | : | **Dr. Shivanand B. Tavali**<br>Lecturer, Dept. of Kannada,<br>J.S.S. College, Dharwad. Cell No.- 9844035788 |
| Published by | : | **Bhoomi Pratishthana, Dharwad**<br>At:Po: Bammigatti, Tq: Kalaghatagi,<br>Dist: Dharwad -581204 Cell No.- 9738664877<br>Email-bhumidharwad@gmail.com |
| Rights | : | Publications |
| First Impression | : | December, 2021 |
| Copies | : | 1000 |
| Pages | : | x + 166 |
| Price | : | 250/- |
| Size | : | 1/8 Demi |
| Paper | : | 80 GSM Maplitho |
| Printed at | : | B.G. Printers, Dharwad. 98452 70114 |
| **ISBN No** | : | **978-81-949100-2-2** |


ವಿ.ಸೂ.- ಇಲ್ಲಿನ ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳಿಗೆ ಲೇಖಕರೇ ಜವಾಬ್ದಾರರು ಹೊರತು ಸಂಪಾದಕರಲ್ಲ.

# ಪುನರ್ನವ


S. V. M. ARTS & COMMERCE WOMEN'S COLLEGE ILKAL 587125


## ಭಾಗ-೬

## ಸಂಶೋಧನೆಯ ವಿಭಿನ್ನ ಆಯಾಮಗಳು

ಸಂಪಾದಕರು

ಡಾ. ಶಿವಾನಂದ ಬ. ಟವಳಿ

ಭೂಮಿ ಪ್ರತಿಷ್ಠಾನ
ಧಾರವಾಡ

S. V. M. ARTS & COMMERCE WOMEN'S COLLEGE ILKAL 587125

## ಒಳಪುಟಗಳಲ್ಲಿ


೧. ಪ್ರಾದೇಶಿಕ ಅಧ್ಯಯನದ ವಿಭಿನ್ನ ನೆಲೆಗಳು
- ಚೇತನ್ ಶೆಟ್ಟಿ ಕೋವಾಡಿ ...೦೧

೨. ನುಲಿಯ ಚಂದಯ್ಯನವರ ಸ್ಥಳ ಮತ್ತು ಕಾಲ ವಿಚಾರ
- ಡಾ. ನಾಗರಾಜ ದಂಡೋತಿ ...೦೭

೩. ವಿಶ್ವ ಪ್ರಸಿದ್ಧ ಪ್ರವಾಸಿ ತಾಣ; ಹಂಪೆ
- ಡಾ. ಪಿ. ನಟರಾಜ ...೧೩

೪. ಬಹು ಆಯಾಮದ ನೆಲೆಯಲ್ಲಿ ಆಯ್ದಕ್ಕಿ ಲಕ್ಕಮ್ಮನ ವಚನಗಳು ...೨೦
- ಶ್ರೀ ರಘುಪ್ರಸಾದ ಟಿ

೫. ನಿರಂಜನ ಅವರ ವಿಮೋಚನೆ ಕಾದಂಬರಿಯಲ್ಲಿನ ಹೋರಾಟದ ಚಿತ್ರಣಗಳು...೨೮
- ಡಾ.ಬಸವರಾಜ ಹಲಕುರ್ಕಿ

೬. ಆರಾಧನಾ ಪದ್ಧತಿಯ ಮೂಲವಿಕಾಸ ಮತ್ತು ವಿಭಿನ್ನ ನೆಲೆಗಳು ...೩೪
- ಡಾ. ಎ.ಆರ್.ಮಹೇಂದ್ರ

೭. ಕುವೆಂಪುರವರ 'ಅಮಲನ ಕಥೆ'ಯಲ್ಲಿ ಮಾನವೀಯ ನೆಲೆಗಳು ...೪೧
- ಡಾ. ಕೆಂಗಲ್ ಮೂರ್ತಿ.ಕೆ.ಜಿ

೮. ಸಿದ್ದಲಿಂಗಯ್ಯನವರ ಕಾವ್ಯದ ಮೇಲೆ ವಚನಕಾರರ ಪ್ರಭಾವ
- ಅಶ್ವತ್ಥ .ಎಸ್ ...೪೬

೯. ಅಬಚೂರಿನ ಪೋಸ್ಟಾಫೀಸು; ಸ್ತ್ರೀವಾದಿ ಹಿನ್ನೆಲೆಯಲ್ಲಿ ವಿಮರ್ಶಾತ್ಮಕ ದೃಷ್ಟಿಕೋನ ...೫೨
- ಬಸವರಾಜ ನಾ. ನಾಗಾವಿ

೧೦. ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿನ 'ಕಾಡೀ'ಯ ಮೂಕವೇದನೆ ...೫೬
- ಶೃತಿ ಚೆಲ್ಲಾಳ್. ಆರ್.

೧೧. ಕನ್ನಡ ಭಾಷೆಯ ಬೆಳವಣಿಗೆ, ಸವಾಲು ಮತ್ತು ಸಾಧ್ಯತೆಗಳು
- ಅನಿತಾ. ಆರ್. ...೬೦

೧೨. ಮಹಿಳಾ ಕನ್ನಡ ಆತ್ಮಕಥನಗಳ ಹೆಜ್ಜೆ ಗುರುತುಗಳು
- ಲಕ್ಷ್ಮಿ. ಎನ್. ...೬೭

೧೩. ಆಲೂರ ವೆಂಕಟರಾಯರ ಕರ್ನಾಟಕತ್ವದ ಐತಿಹಾಸಿಕ ನೆಲೆಗಳು ...೭೪
- ಎಮ್.ಎಸ್. ಬೇವೂರ

೧೪. ಪಿತೃ ಪ್ರಧಾನತೆ–ಮಾತೃ ಪ್ರಧಾನತೆ
- ಸುವರ್ಣಾ ರೇ ಕಲ್ಯಾಣಶೆಟ್ಟಿ ...೮೦





೧೫. ಡಾ. ಎಂ.ಎಸ್. ಸುಂಕಾಪುರ ಸಂಪಾದಿತ ಕೃತಿಗಳ ಅವಲೋಕನ ...೮೫
- ಬಸರಕೋಡು ನಾಗರಾಜ

೧೬. ವನದೇವಿಯ ಮಕ್ಕಳು: ನಮ್ಮ ಬುಡಕಟ್ಟು ಜನಾಂಗದವರು ...೯೨
- ಸಿಂಧು ಭಾರ್ಗವ, ಬೆಂಗಳೂರು

೧೭. ಕರ್ನಾಟಕದ ಧಾರ್ಮಿಕ ಪರಂಪರೆಗಳು ...೯೭
- ಆನಂದ ಎ.

೧೮. ಜನಪದ ಹಾಲುಮತ ಮಹಾಕಾವ್ಯಗಳ ಭಾಷಿಕ ಸ್ವರೂಪ ...೧೦೨
- ನೀಲಕಂಠ ಪೂಜಾರ

೧೯. ಹಾಲುಮತ ಸಮುದಾಯದ ಸಾಂಸ್ಕೃತಿಕ ಮಹಿಳೆಯರು ...೧೦೫
- ಸಂಗೀತಾ ಕುರಿ, ಡಾ. ಎನ್.ಎಂ. ಅಂಬಲಿ

೨೦. ವಿಜಯನಗರ ಜಿಲ್ಲೆಯ ಹೊಸಪೇಟೆಯಲ್ಲಿನ
ವಿಜಯನಗರ ಕಾಲದ ದೇವಾಲಯಗಳು ...೧೧೩
- ವಿಜಯ ನಾಯ್ಕ ಎಲ್, ಡಾ.ತಾರಿಹಳ್ಳಿ ಹನುಮಂತಪ್ಪ

೨೧. ಭಾರತೀಯ ಆಧ್ಯಾತ್ಮಿಕ ಪರಂಪರೆಯಲ್ಲಿ ಗುರು; ಒಂದು ಅವಲೋಕನ ...೧೧೮
- ವರುಣ್ ರಾಜ್ ಜೀ

೨೨. ಸಮೃದ್ಧಿ ಬಯಸುವ 'ದವಾಳಿ' :
ಲಂಬಾಣಿ ಸಮುದಾಯದ ವಿಶಿಷ್ಟ ಆಚರಣೆ ...೧೨೪
- ಉಮೇಶ್ ನಾಯ್ಕ್. ಎನ್

೨೩. ಹೋರಾಟದ ಹಾಡುಗಳು : ರೈತ ಚಳವಳಿಯ ಧೋರಣೆಗಳ ಅನಾವರಣ...೧೩೦
- ರವೀಂದ್ರ ಕೆ. ವಿ

೨೪ ಬನ್ನಿಮರ – ಪ್ರಕೃತಿಯಿತ್ತ ಬಂಗಾರದಂತಹ ವರ ..೧೩೭
- ಲಿಂಗರಾಜ ನಿಡುವಣಿ

೨೫. ಸುಡುಗಾಡುಸಿದ್ಧರ ನೀತಿಕಥೆಗಳು ಮತ್ತು ಪರಿಸರ ಕಥೆಗಳ ಸಂಗ್ರಹ..೧೪೪
- ದುರುಗೇಶ ರುದ್ರಾಕ್ಷಿ

೨೬. ಕೌಶಿಕ ರಾಮಾಯಣ ಮತ್ತು ತೊರವೆ ರಾಮಾಯಣಗಳ
ಅಭಿವ್ಯಕ್ತಿ ಮತ್ತು ಛಂದಸ್ಸು ..೧೪೯
- ವಸಂತಲಕ್ಷ್ಮಿ

೨೭. ಜನಪದರ ಅಭಿವ್ಯಕ್ತಿಯಲ್ಲಿ ಪ್ರಕೃತಿ, ಪ್ರಾಣಿ ಮತ್ತು ಪಕ್ಷಿ ..೧೫೭
- ಡಾ. ಶಿವಾನಂದ ಬ. ಟವಳಿ.

S. V. M. ARTS & COMMERCE WOMEN'S COLLEGE
ILKAL
587125

# ಪಿತೃ ಪ್ರಧಾನತೆ-ಮಾತೃ ಪ್ರಧಾನತೆ

– ಸುವರ್ಣಾ.ರೇ. ಕಲ್ಯಾಣಶೆಟ್ಟಿ [1], ಡಾ. ಶಿವಲೀಲಾ. ಬಸವರಾಜ [2]

ಮಾತೃಪ್ರಧಾನ ಕುಟುಂಬ ವ್ಯವಸ್ಥೆಯ್ಲಲ್ಲಿ ವಂಶದ ಮುಂದುವರಿಯುವಿಕೆ ಹೆಣ್ಣಿನಿಂದಾದರೂ ಸಹಿತ 'ಕುಟುಂಬದ ಅಧಿಕಾರ', 'ಯಜಮಾನತ್ವ' ಮಾತ್ರ ಪುರುಷರದ್ದೇ ಆಗಿರುತ್ತದೆ. ನಾಗರಿಕತೆ ಬೆಳೆದಂತೆಲ್ಲ ಗಂಡು ಕೃಷಿಕಾರ್ಯ, ನೇಯ್ಗೆ, ಕಮ್ಮಾರಿಕೆ ಮುಂತಾದ ಹೊರಗಿನ ಕೆಲಸಗಳಲ್ಲಿ ತನ್ನುನ್ನು ತಾನು ತೋಡಗಿಸಿಕೊಂಡ. ತನ್ನ ಹೆಂಡತಿ ಮಕ್ಕಳು ಎಂಬ ಪರಿಕಲ್ಪನೆ ಉಂಟಾಗಿ ಒಂದು ಕಡೆ ನೆಲೆಸಲು ಪ್ರಾರಂಭಿಸಿದ. ಶ್ರಮ ವಿಭಜನೆಯ ಹಿನ್ನಲೆಯಲ್ಲಿ ಗಂಡು-ಹೆಣ್ಣು ತಮ್ಮತಮ್ಮ ಕೆಲಸಗಳನ್ನು ವಿಂಗಡಿಸಿಕೂಂಡರು. ಹೆಣ್ಣು ಮನೆಯೋಳಗಿನ ಕರ್ತವ್ಯಗಳನ್ನು ನಿಭಾಯಿಸಿದರೆ, ಗಂಡು ಮನೆ ಹೂರರಗಿನ ಕೆಲಸ ಕಾರ್ಯಗಳಲ್ಲಿ ತೂಡಗಿಸಿಕೂಂಡನು. ಗಂಡು ತನ್ನ ಮನೆ ದನ, ಕರು, ಕೋಳಿ, ಕುರಿ, ಭೂಮಿ ಮುಂತಾದವುಗಳ ಜೊತೆಗೆ ತನ್ನ ಹೆಂಡತಿಯನ್ನು ಸಹ ತನ್ನ ಜವಾಬ್ದಾರಿ ಎಂದು ತಿಳಿದುಕೊಂಡ. ಅವಳ ಮೇಲೆ ಕ್ರಮೇಣ ಅವನ ಅಧಿಕಾರ ಹಕ್ಕು ಚಲಾವಣೆಗೂಳ್ಳತೂಡಗಿತು. ಅಭಿವೃದ್ಧಿಗೊಂಡ ಸಮಾಜದಲ್ಲಿ ಅವನ ಸ್ಥಾನಮಾನಗಳು ಬಲಗೂಳ್ಳುತ್ತಿರುವುದರಿಂದ, ಈ ಹಂತದಲ್ಲಿಯೇ ಮಾತೃ ಪ್ರಧಾನತೆಯು ಪಿತೃ ಪ್ರಧಾನತೆಯ ಕಡೆಗೆ ತಿರುಗಿದ ಘಟ್ಟವನ್ನು ಮನುಷ್ಯ ಕುಲದ ಕ್ರಾಂತಿಕಾರಕ ಪ್ರತಿಭಟನಾತ್ಮಕ ಹಂತ ಎಂದು ಸಮಾಜಶಾಸ್ತ್ರಜ್ಞರು ಗುರುತಿಸುತ್ತಾರೆ. ಜಗತ್ತಿನ ಅನೇಕ ಬುಡಕಟ್ಟುಗಳಲ್ಲಿ ಪುರುಷನಿಂದ ವಂಶಾವಳಿ ಮೂಲವನ್ನು ಗುರುತಿಸುವ ಪದ್ಧತಿ ಇದೆ. ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯ ಪತನದ ನಂತರ ಹೆಣ್ಣಿನ ಪ್ರಧಾನತೆಯು ಹಿನ್ನೆಲೆಗೆ ಸರಿದು ಅವಳಿಗೆ ಮೀಸಲಾದ ಮನೆಯ ನಾಲ್ಕು ಗೋಡೆಯೊಳಗೆ ಆಕೆ ಬಂಧಿತಳಾದಳು. ಅವಳು ಗಂಡನ ಕಾಮ ತೃಪ್ತಿ, ಸಂತತಿಯ ಮುಂದುವರೆಯುವಿಕೆಗಾಗಿ ಮುಖ್ಯಳಾದಳು. ಈ ಹಂತದಲ್ಲಿ 'ವಿವಾಹ' ಎಂಬ ವ್ಯವಸ್ಥೆ ಹೆಣ್ಣಿಗೆ ಮುಖ್ಯವಾಗಿ, ಗಂಡು ಅದರಿಂದಾಚೆಗೆ ಚಲಿಸಬಹುದು ಎಂಬ ತಿಳುವಳಿಕೆ ಸೃಷ್ಠಿಯಾಯಿತು. ಈ ಕಾರಣದಿಂದಲೇ ಅನೇಕ ಪುರುಷರು ಕೇವಲ ಒಬ್ಬ ಹೆಂಡತಿಗೆ ಮೀಸಲಾಗಿರದೇ 'ಬಹುಪತ್ನಿತ್ವ' ಮತ್ತು ವಿವಾಹೇತರ ಸಂಬಂಧಗಳನ್ನು ಇಟ್ಟುಕೊಳ್ಳತೊಡಗಿದರು. ಇದಕ್ಕೆ ಸಾಮಾಜಿಕ ಮಾನ್ಯತೆಯೂ ಲಭ್ಯವಾಯಿತು. ಹೆಣ್ಣಿಗೆ 'ವಿವಾಹ' ಇದೊಂದು ಸಾಮಾಜಿಕ ಸಂಸ್ಥೆಯಾಗಿ ಅವಳು ಆ ಪರಿಧಿಯೂಳಗೆ ಬದುಕಬೇಕೆಂಬ ಒಂದು ನಿರೀಕ್ಷೆ ಆರಂಭವಾಯಿತು. ಲೈಂಗಿಕ ನೆಲೆಯಲ್ಲಿ ಹೆಣ್ಣು ಗಂಡು ಎಂಬ ಸ್ವರೂಪ ಮುಂದುವರೆಯಿತು. ಕ್ರಮೇಣ ಲೈಂಗಿಕ ಶೋಷಣೆ ಕಾಣಿಸಿಕೊಳ್ಳಲಾರಂಭಿಸಿತು. ಗ್ರೀಕ್ ಜನಾಂಗದಲ್ಲಿ ಹೆಣ್ಣನ್ನು ಕುಟ್ಟುಂಬದ ಪ್ರಧಾನ



ಎಂದು ಭಾವಿಸಿದರೂ ಸಹಿತ ಅವಳನ್ನು ಗುಲಾಮಿ ಹೆಣ್ಣು ಮಕ್ಕಳನ್ನು ನೋಡಿಕೂಳ್ಳುವ ಕೆಲಸದಲ್ಲಿ ತೊಡಗಿಸುತ್ತಿದ್ದರು. ಸಮಾಜದಲ್ಲಿ ಗಂಡು ಸುಂದರ ಹೆಣ್ಣು ಮಕ್ಕಳನ್ನು ವಿವಾಹವಾದರೂ ಸಹ ಗುಲಾಮಿ ಹೆಣ್ಣುಮಕ್ಕಳನ್ನು ಉಪಪತ್ನಿಯರನ್ನಾಗಿ ಆರಿಸಿಕೊಳ್ಳುತ್ತಿದ್ದ. ಅವನಿಗೆ ಹೆಂಢತಿ ಅಲ್ಲದೆ ಅನೇಕ ಹೆಣ್ಣುಗಳ ಲೈಂಗಿಕ ಸಂಬಂಧ ಇರಿಸಿಕೊಳ್ಳುವ ಅವಕಾಶವಿರುತ್ತಿತ್ತು. ಮಕ್ಕಳಾಗದ ಹೆಂಡತಿಯನ್ನು ನಿರಾಕರಿಸಬಹುದಾಗಿತ್ತು. ಗಂಡಂದಿರು ಯುದ್ಧಕ್ಕೆ ಹೋದಾಗ ಮನೆಗೆಲಸವನ್ನು ಮಾಡಿಕೊಂಡು ಹೆಣ್ಣುಮಕ್ಕಳು ಮನೆಯಲ್ಲಿಯೇ ಇರಬೇಕಾಗಿತ್ತು. ಅವರನ್ನು ಕಾಯಲು ನಾಯಿಗಳನ್ನು, ನಪುಂಸಕ ಪುರುಷರನ್ನು ನೇಮಿಸಲಾಗುತ್ತಿತ್ತು. ಈ ಎಲ್ಲ ಗಂಡಂದಿರು ಏಕಪತಿತ್ವವನ್ನು ಅನುಸರಿಸುತ್ತಿದ್ದರೂ ಉಪಪತ್ನಿಯರನ್ನು ನಿರಾಕರಿಸುತ್ತಿರಲಿಲ್ಲ. ಏಕಪತ್ನಿತ್ವ ಪದ್ಧತಿ ಸಮಾಜದಲ್ಲಿ ಗಂಡು-ಹೆಣ್ಣುಗಳ ಸಮಾನತೆಯನ್ನು ಕಾಣಿಸಿಕೊಳ್ಳದೆ ಗಂಡು ಹೆಣ್ಣನ್ನು ತನ್ನ ಆಧೀನಗೊಳಿಸುವ ಪದ್ಧತಿ ಕ್ರಮೇಣ ಕಾಣಿಸಿಕೊಂಡಿತು ಎಂದು ಹೇಳುತ್ತಾರೆ.

**ಮಾತೃ ಪ್ರದಾನತೆ**

ಮಾತೃ ಎಂದರೆ ತಾಯಿ. ಯಾವ ಕುಟುಂಬದಲ್ಲಿ ಹಿರಿಯ ಸ್ತ್ರಿ ಕುಟುಂಬ ನಿರ್ವಹಣೆ, ಪೂರ್ಣ ಅಧಿಕಾರ ಹೊಂದಿರುತ್ತಾಳೆಯೋ ಅಂಥ ಕುಟುಂಬವನ್ನು ಮಾತೃ ಪ್ರಧಾನ ಕುಟುಂಬ ಎನ್ನುವರು. ಈ ಕುಟುಂಬಗಳಲ್ಲಿ ತಾಯಿಯೇ ಕುಟುಂಬದ ಯಜಮಾನಿ. ಅವಳದೇ ಆಡಳಿತ, ಆಸ್ತಿಪಾಸ್ತಿಗಳ ವ್ಯವಹಾರವು ಆಕೆಯ ಹೇಸರಿನಲ್ಲಿಯೇ ನಡೆಯುತ್ತದೆ. ವಂಶಾವಳಿಯು ತಾಯಿಯ ಮೂಲಕ ಗುರುತಿಸುವ ಕುಟುಂಬವು ಮಾತೃ ಪ್ರಧಾನ ಕುಟುಂಬವಾಗಿದೆ.

ಮಾತೃ ಪ್ರಧಾನ ಕುಟುಂಬದಲ್ಲಿ ಸ್ತ್ರೀಯು ವಿವಾಹದ ನಂತರ ತಾಯಿಯ ಮನೆಯಲ್ಲಿ ಮುಂದುವರಿಯುರಿಯುತ್ತಾಳೆ. ಅಂದರೆ ಸ್ತ್ರೀಯು ತಾನು ಹುಟ್ಟಿ ಬೆಳೆದ ಮನೆಯನ್ನು ಬಿಟ್ಟು ಗಂಡನ ಮನೆಗೆ ಹೋಗುವುದಿಲ್ಲ. ಬದಲಾಗಿ ಆಕೆಯ ಪತಿಯೇ ಪತ್ನಿಯ ಜೋತೆಗೆ ಬಂದು ಇರುವನು. ಮಾತೃ ಪ್ರಧಾನ ಕುಟುಂಬದಲ್ಲಿ ಹೆಣ್ಣು ಮಕ್ಕಳ ಸದಸ್ಯತ್ವ ಶಾಶ್ವತವಾಗಿದ್ದು, ಗಂಡು ಮಕ್ಕಳ ಹೆಸರು ತಾತ್ಕಾಲಿಕವಾಗಿರುತ್ತದೆ. ಗಂಡನನ್ನು ಕೇವಲ ಗೌರವಾನ್ವೀತ ಬೇಟಿಗಾರರು ಎಂದು ಪರಿಗಣಿಸಲಾಗುತ್ತಿತ್ತು. ತನಗೆ ಬೇಕಾದಾಗ ಬಂದು ಅವಳ ಜೋತೆಗೆ ಇದ್ದು ಹೋಗಬಹುದಾಗಿತ್ತು. ಇಲ್ಲಿ ಪುರುಷನು ತನ್ನ ತಾಯಿಯ ಮನೆಯಲ್ಲಿ ವಾಸಿಸಿ ತನ್ನ ಸಹೋದರಿಯ ಆಸ್ತಿಗಳನ್ನು ನೋಡಿಕೋಳ್ಳು ಪ್ರತಿನಿಧಿಯಾಗಿ ಇರುತ್ತಾನೆ. ಆತನಿಗೆ ತನ್ನ ಪತ್ನಿಯ ತವರಿನಲ್ಲಿ ಉತ್ತಮ ಸ್ಥಾನಮಾನ ಮತ್ತು ಮಕ್ಕಳ ಮೇಲೆ ಯಾವುದೇ ಅಧಿಕಾರವು ಇರುತ್ತರಲಿಲ್ಲ. ಮಕ್ಕಳ ಸಂರಕ್ಷಣೆ ಮಾತೃಪ್ರಧಾನ ಕುಟುಂಬಗಳಲ್ಲಿ ಹೆಂಡತಿಯ ತವರಿನಲ್ಲಿಯೇ ನಡೆಯುತಿದ್ದು ಆ ಮಕ್ಕಳ ಮೇಲೆ ತಂದೆಯ ನಿಯಂತ್ರಣವು ಅತ್ಯಂತ ಕನಿಷ್ಠ ಕನಿಷ್ಠಮಟ್ಟದ್ದಾಗಿರುತ್ತಿತ್ತು. ರಕ್ತ ಸಂಬಂಧವೂ ತಾಯಿಯ ಮೂಲಕ ನಿರ್ಧರಿಸಲ್ಪಡುತ್ತಿತ್ತು.

ಇಲ್ಲಿ ಸಾಮಾನ್ಯವಾಗಿ ತಾಯಿ, ಚಿಕ್ಕಮ್ಮ ಆಕೆಯ ಸಹೋದರ ಸಹೋದರಿಯರು ಅವರ ಮಕ್ಕಳು ಮತ್ತು ಇತರ ರಕ್ತ ಸಂಬಂಧಿಗಳು ಈ ಕುಟುಂಬಕ್ಕೆ ಸೇರಿರುತ್ತಿದ್ದರು. ಒಟ್ಟಿನಲ್ಲಿ ಮಾತೃ ಪ್ರಧಾನ ಕುಟುಂಬ ಪ್ರಾಚೀನ ಸಮಾಜದಲ್ಲಿ ಮಾತ್ರವಲ್ಲದೆ ನಾಗರಿಕ ಸಮಾಜದಲ್ಲಿಯೂ ಕಂಡು ಬಂದಿತ್ತು.

**ಮಾತೃಪ್ರಧಾನ ಕುಟುಂಬದ ಗುಣಲಕ್ಷಣಗಳು**

1. **ಮಾತೃ ವಂಶಾವಳಿ –** ಇಂಥ ಕುಟುಂಬಗಳಲ್ಲಿ ತಾಯಿಯೇ ಮನೆಯೊಡತಿ. ವಂಶಾವಳಿಯನ್ನು ತಾಯಿಯ ಮೂಲಕ ಗುರುತಿಸಲಾಗುವುದು. ಇಂಥ ಕುಟುಂಬಗಳಲ್ಲಿ ಮಕ್ಕಳು ತಾಯಿಯ ವಂಶಕ್ಕೆ ಸೇರಿರುವದರಿಂದ ಮಕ್ಕಳನ್ನು ಮಾತ್ರ ಮಾತೃವಂಶಿಯ ಎಂದು ಕರೆಯಲಾಗುವುದು.
2. **ಆಸ್ತಿಯ ಉತ್ತರಾಧಿಕಾರ ಅಥವಾ ಉತ್ತರಾಧಿಕಾರದ ಹಕ್ಕು –** ಮಾತೃಪ್ರಧಾನ ಕುಟುಂಬಗಳಲ್ಲಿ ಆಸ್ತಿಪಾಸ್ತಿಯ ಹಕ್ಕು ಹೆಣ್ಣುಮಕ್ಕಳಿಗೆ ಲಭಿಸುತ್ತದೆ. ಅಂದರೆ ಕುಟುಂಬದ ಆಸ್ತಿ, ಅಧಿಕಾರ ಮತ್ತು ಉತ್ತರದಾಯಿತ್ವ ತಾಯಿಂದ ಮಗಳಿಗೆ ಮಗಳಿಂದ ಮೊಮ್ಮಗಳಿಗೆ ವರ್ಗಾಯಿಸಲ್ಪಡುತ್ತದೆ. ಉತ್ತರಾಧಿಕಾರತ್ವ ಸ್ತ್ರೀ ಕುಲವನ್ನು ಅನುಸರಿಸುವುದು ಸರ್ವ ಸಾಮಾನ್ಯವಾಗಿ ಅಕೆಯ ಹಿರಿಯ ಮಗಳಿಗೆ ಸೇರಿರುತ್ತದೆ. ಆದರೆ ಆದಿವಾಸಿಗಳಲ್ಲಿ ಕಿರಿಯ ಮಗಳಿಗೆ ವರ್ಗಾಯಿಸಲ್ಪಡುತ್ತದೆ. ಧಾರ್ಮಿಕ ಕಾರ್ಯಗಳಲ್ಲಿ ಪ್ರಮುಖ ಪಾತ್ರ ವಹಿಸುವ ಹೆಣ್ಣಿಗೆ ಆಸ್ತಿಗೆ ಸಂಬಂಧಿಸಿದಂತೆ ಕೆಲವು ಇತಿಮಿತಿಗಳಿರುತ್ತವೆ.
3. **ಅಧಿಕಾರ ಚಲಾವಣೆ –** ಮಾತೃಮೂಲ ಕುಟುಂಬಗಳಲ್ಲಿ ಶಾಶ್ವಿಕವಾಗಿ ತಾಯಿಯೇ ಸರ್ವಾಧಿಕಾರಿ ಅಂದರೆ ಕುಟುಂಬದ ಸಂಪೂರ್ಣ ಅಧಿಕಾರ ಸ್ತ್ರೀಯ ಕೈಯಲ್ಲಿರುತ್ತದೆ. ಸ್ತ್ರಿಯು ಕುಟುಂಬದ ಯಜಮಾನ ಆಗಿರುತ್ತಾಳೆ. ಸ್ತ್ರೀಯು ಅಧಿಕಾರ ಚಲಾಯಿಸುವಳು. ಗಂಡ ಮತ್ತು ಆಕೆಯ ಮಕ್ಕಳು ಧಾರ್ಮಿಕ ಕಾರ್ಯ, ರಾಜಕೀಯ, ಮನೊರಂಜನೆ, ಹೀಗೆ ಎಲ್ಲಾ ವಿಷಯಗಳಲ್ಲಿ ಆಕೆಯದ್ದೇ ಅಂತಿಮ ತೀರ್ಮಾನ. ಎಲ್ಲಾ ಅಧಿಕಾರ ಮತ್ತು ಸೌಲಭ್ಯಗಳನ್ನು ಸ್ತ್ರೀಯು ಹೊಂದಿರುತ್ತಾಳೆ. ಸ್ವತಂತ್ರವಾಗಿ ಪಾಲ್ಗೊಳ್ಳುವಿಕೆ ಸ್ತ್ರೀಯರದ್ದೇ ಆಗಿರುತ್ತದೆ. ಮಾತೃಪ್ರಧಾನ ಕುಟುಂಬಗಳಲ್ಲಿ ತಾಯಿಗೆ ಪ್ರಧಾನತೆ ಇರಬೇಕೆಂದು ಅಂಗೀಕಾರ ಆಗಿರುವುದಾದರೂ ವಾಸ್ತವಿಕವಾಗಿ ಅದು ಆಕೆಯ ಸಹೋದರನಿಗೆ ವರ್ಗಾಯಿಸಲ್ಪಡುತ್ತದೆ. ಎಲ್ಲ ವ್ಯವಹಾರಗಳನ್ನು ನಿರ್ವಹಿಸುವ ಜವಾಬ್ದಾರಿ ವಹಿಸಿಕೊಂಡಿರುವ ಸಹೋದರನೇ ಆಗಿರುತ್ತಾನೆ. ಕೆಲವು ಬಾರಿ ತಂದೆಯು ಹೆಚ್ಚು ಪ್ರಶಸ್ತ ಹೊಂದಿರುತ್ತಾರೆ. ಉದಾಹರಣೆಗೆ ಲ್ಯಾಬ್ರಡಾರ್ ಇಂಡಿಯನ್ನರಲ್ಲಿ ತಾಯಿಯ ಹಿರಿಯ ಸಹೋದರನಿಗೆ ಸರ್ವಾಧಿಕಾರತ್ವ ಇರುತ್ತದೆ ಹಾಗೂ ಹಿರಿಯ ಸಹೋದರನೇ ಎಲ್ಲ ಅಧಿಕಾರ ನಡೆಸುವನು.



S. V. M. ARTS & ... WOMEN'S COLLEGE ILKAL 587125

**ಪಿತೃ ಪ್ರಧಾನತೆ**

ಪಿತೃಪ್ರಧಾನತೆ ಎಂಬುದಕ್ಕೆ ಸಮಾನ ಅರ್ಥದ ಪ್ರತಿಯಾಗಿ "ಪೇಟ್ರೀಯಾರ್ಖಿ" ಎಂಬ ಆಂಗ್ಲ ಪದ ಗ್ರೀಕ್ ಮೂಲದ "ಪೇಟ್ರಿಯ"(ಅರ್ಥ ತಂದೆ) ಮತ್ತು ಆರ್ಖಿ (ಅರ್ಥ ಆಳ್ವಿಕೆ) ಎಂಬ ಪದಗಳಿಂದ ಉತ್ಪತ್ತಿ ಹೊಂದಿದೆ. ಹೀಗೆ ಪಿತೃಪ್ರಧಾನದ ಅರ್ಥ "ಪಿತೃಗಳ ಆಳ್ವಿಕೆ" ಎಂಬುದನ್ನು "ಪಿತೃ ಆಳ್ವಿಕೆ"ಯನ್ನು ಅರ್ಥವಿರುವುದು. ಜೆ.ಜೆ. ಮ್ಯಾಸಿಯೆನಿಸ್ ಎಂಬ ಸಮಾಜಶಾಸ್ತ್ರಜ್ಞ ಹೇಳುವಂತೆ 'ಪಿತೃ ಪ್ರಧಾನತೆ ಎಂಬುದು ಸ್ತ್ರೀಯರ ಮೇಲೆ ಪುರುಷರ ಪ್ರಾಬಲ್ಯವಿರುವ ಸಾಮಾಜಿಕ ಸಂಘಟನೆಯನ್ನು ಪ್ರತಿನಿಧಿಸುತ್ತದೆ. ಸಾಮಾನ್ಯರ ಪರಿಭಾಷೆಯಲ್ಲಿ ಪುರುಷ ಪ್ರಧಾನತೆ ಎಂಬುದು ಪುರುಷನು ಯಜಮಾನನಾಗಿರುವ ಕುಟುಂಬವನ್ನು ಅಥವಾ ಪಿತೃಪ್ರಧಾನ ಕುಟುಂಬವನ್ನು ಪ್ರತಿನಿಧಿಸುತ್ತದೆ. ಕೆಲವು ಪುರುಷರಿಗಿಂತ ಕೆಲವು ಪುರುಷರಿಗೆ ಹೆಚ್ಚು ಅನುಕೂಲತೆಗಳು ಇರುತ್ತದೆ ಎನ್ನುವುದು ನಿಜವಾಗಿದ್ದರೂ ಸರ್ವಸಾಮಾನ್ಯವಾಗಿ, ಸ್ತ್ರೀಯರಿಗಿಂತಲೂ ಪುರುಷರಿಗೆ ಹೆಚ್ಚಿನ ಸಾಮಾಜಿಕ ಸಂಪನ್ಮೂಲಗಳು ಲಭ್ಯವಿರುತ್ತದೆ ಎಂಬುದು ನಿಜ. ಕುಟುಂಬಗಳಲ್ಲಿ ಪುರುಷರಿಗೆ ಹೆಚ್ಚಿನ ಅನುಕೂಲಗಳಿದ್ದವು ಎಂಬುದನ್ನು ಇತಿಹಾಸದುದ್ದಕ್ಕೂ ಗಮನಿಸಬಹುದಾಗಿದೆ.

**ಪಿತೃಪ್ರಧಾನ ಕುಟುಂಬದ ಮುಖ್ಯ ಲಕ್ಷಣಗಳು**

ವಂಶಾವಳಿ ಮತ್ತು ಆಸ್ತಿಯ ಉತ್ತರಾಧಿಕಾರದ ಹಕ್ಕುಗಳಲ್ಲಿ ವಂಶ ಪರಂಪರೆಯನ್ನು ತಂದೆಯಿಂದ ಮಕ್ಕಳಿಗೆ ವರ್ಗಾಯಿಸಲಾಗುವುದು. ಆದರೆ ಆಸ್ತಿಯ ಅಧಿಕಾರಿಗಳು ತಂದೆಯಿಂದ ಮಗನಿಗೆ ಮಾತ್ರ ಇರುವುದು ತಂದೆಯ ನಂತರ ಆತನ ಸಕಲ ಸ್ವತ್ತುಗಳ ವಾರಸುದಾರ ಹೆಣ್ಣುಮಕ್ಕಳಿಗೆ ಇರುವುದಿಲ್ಲ. ಗಂಡು ಮಕ್ಕಳು ಇಲ್ಲದೆ ಇದ್ದಾಗ ಮಾತ್ರ ಅವರಿಗೆ ಆಸ್ತಿ ಪ್ರಾಪ್ತವಾಗುವುದು.

1. **ಪಿತೃ ಗೃಹ ನಿವಾಸ : –** ಪಿತೃಪ್ರಧಾನ ಕುಟುಂಬದಲ್ಲಿ ಪಿತೃ ಗೃಹ ನಿವಾಸ ಪದ್ಧತಿ ಇರುತ್ತದೆ. ವಿವಾಹದ ನಂತರ ಪತ್ನಿಯಾದವಳು ತನ್ನು ತವರನ್ನು ಬಿಟ್ಟು ಗಂಡನೋಂದಿಗೆ ಆತನ ಪಿತೃವಿನ ಜೊತೆಯಲ್ಲಿ ವಾಸವಾಗಿರಬೇಕಾಗುವುದು. ಆಕೆಯ ಮಕ್ಕಳು ಇಲ್ಲಿಯೆ ಹುಟ್ಟಿ ಇಲ್ಲಿಯೆ ಪೋಷಿಸ್ಪಡುತ್ತದೆ. ಹೆಣ್ಣು ಮಕ್ಕಳು ಮಾತ್ರ ವಿವಾಹ ನಂತರ ಮನೆ ಬಿಟ್ಟು ಗಂಡನ ಮನೆಗೆ ಹೋಗಬೇಕಾಗುತ್ತದೆ.
2. **ಅಧಿಕಾರ ಚಲಾವಣೆ : –** ಇಲ್ಲಿ ತಂದೆಯೇ ಸರ್ವಾಧಿಕಾರಿ. ಎಲ್ಲಾ ಅಧಿಕಾರಗಳು ಆತನಲ್ಲಿ ಕೇಂದ್ರೀಕೃತ. ಎಲ್ಲ ವಿಷಯಗಳಲ್ಲಿ ಆತನ ತೀರ್ಮಾನವೇ ಅಂತೀಮವಾಗಿದ್ದು, ಕುಟುಂಬದ ವ್ಯವಹಾರ ಉಸ್ತುವಾರಿಗೆ ಆಸ್ತಿಯ ನಿರ್ವಹಣೆ ಧಾರ್ಮಿಕ ಕಾರ್ಯಗಳಲ್ಲಿ, ಭಾವನೆಯಲ್ಲಿಯೂ ಆತನ ಹೊಣೆಗಾರಿಕೆಗೆ ಸೇರಿದ್ದು ಆತನ ಅಧಿಕಾರವನ್ನು ಯಾರೂ ಪ್ರಶ್ನಿಸುವಂತಿಲ್ಲ. ಪ್ರಾಚೀನ ಕಾಲದ ರೋಮ ದೇಶದಲ್ಲಿ ತಂದೆಯಾದವನು ಮಕ್ಕಳನ್ನು ಹಾಗೂ ಹೆಂಡತಿಯನ್ನು

ಕೊಳ್ಳಬಹುದಿತ್ತು. ಮಾರಾಟ ಮಾಡಬಹುದಿತ್ತು. ಶ್ರೀಮಂತ ಪುರುಷರು ತಮ್ಮ ಹೆಂಡಂದಿರನ್ನು ಹಾಗೂ ಹೆಣ್ಣು ಮಕ್ಕಳನ್ನು ಪ್ರತ್ಯೇಕ ಕೋಣೆಗಳಲ್ಲಿ ಇರಿಸುತ್ತಿದ್ದರು. ಮೋಘಲ್ ಅರಸರ ಆಳ್ವಿಕೆಯಲ್ಲಿ ಅರಸರ ಅಂತಃಪುರಗಳಲ್ಲಿ ಹೆಂಗಸರಿಗಾಗಿರುವ ಕೋಣೆಗಳಿಗೆ ಯಾರು ಹೋಗುವಂತಿರಲಿಲ್ಲ.

ಪಿತೃಪ್ರಧಾನತೆ ಎಂಬುದು ತುಲನಾತ್ಮಕವಾಗಿ ಹೆಚ್ಚು ಪ್ರಸ್ತುತವಿದ್ದ ದಿನಗಳಿದ್ದವು. ಕೈಗಾರಿಕಾ ಪೂರ್ವ ಸಮಾಜಗಳಲ್ಲಿ ಸ್ತ್ರಿಯರು ಗರ್ಭಧಾರಣೆಯ ಹಾಗೂ ಮಕ್ಕಳ ಜನನದ ಯಾವುದೇ ವೈಯಕ್ತಿಕ ಅಭಿಪ್ರಾಯ ತಳೆಯುವ ಸ್ಥಿತಿಯಲ್ಲಿರಲಿಲ್ಲ. ಅವುಗಳ ಮೇಲಿನ ನಿಯಂತ್ರಣ ಸಾಧ್ಯವಾಗಿರಲಿಲ್ಲ. ಕೈಗಾರಿಕಾ ಸಮಾಜದಲ್ಲಿ ಅಧುನಿಕ ತಂತ್ರ ತಾಂತ್ರಿಕತೆಯು ಮಕ್ಕಳ ಜನನದ ಮೇಲೆ ನಿಯಂತ್ರಣ ಮಾಡಲು ಕಲಿಸಿದ್ದು ಮಾತ್ರವಲ್ಲದೆ ಹೇಗೆ ಜೀವಿಸಬೇಕೆಂದು ಜನರಿಗೆ ತಿಳಿಸಿಕೊಟ್ಟಿತು. ಆದರೆ ಇಂದಿನ ಕೈಗಾರಿಕೆ ಸಮಾಜಗಳಲ್ಲಿ ಸ್ತ್ರೀಯರು ಹಾಗೂ ಪುರುಷರ ನಡುವಿನ ವ್ಯತ್ಯಾಸಗಳನ್ನು ಇಂದಿಗೂ ಸಂಪೂರ್ಣವಾಗಿ ಸಮರ್ಥಿಸಿ, ಆಶ್ಚರ್ಯವೆಂಬಂತೆ ಜಗತ್ತಿನ ಅತ್ಯಂತ ಮುಂದುವರಿದ ದೇಶವಾದ ಅಮೇರಿಕದಲ್ಲಿಯು ಕೂಡ ಇಂದಿಗೂ ಪುರುಷ ಪ್ರಾಬಲ್ಯವು ಒಂದಲ್ಲ ಒಂದು ರೀತಿಯಲ್ಲಿ ಮುಂದುವರೆದಿದೆ. ಮತ್ತೊಮ್ಮೆ ಪಿತೃ ಪ್ರಧಾನತೆ ಇಂದಿಗೂ ಅನಿವಾರ್ಯವೇ? ಎಂಬ ಪ್ರಶ್ನೆಯನ್ನು ಮಂಡಿಸುವುದು. ಕೆಲವು ಸಂಶೋಧಕರು ಸ್ತ್ರೀ ಪುರುಷರಲ್ಲಿ ಕಂಡುಬರುವ ಹಾರ್ಮೋನಗಳಲ್ಲಿ ವ್ಯತ್ಯಾಸ ಇರುವುದನ್ನು ಮತ್ತು ವರ್ತನೆಗಳು ಅದರಲ್ಲೂ ಮುಖ್ಯವಾಗಿ ಪುರುಷರಲ್ಲಿ ಕಾಣಬರುವ ಆಕ್ರಮಣಶೀಲತೆ ಹುಟ್ಟಿಕೊಳ್ಳುವುದು ಎಂದು ವಾದಿಸಿದ್ದಾರೆ. ಪಿತೃಪ್ರಧಾನತೆ ಎಂಬುದಿದೆ ಹಾಗೂ ಅದನ್ನು ತೊಡೆದು ಹಾಕುವುದು ಅಸಾಧ್ಯ ಆದರೆ ಬಹುತೇಕ ಸಮಾಜಶಾಸ್ತ್ರಜ್ಞರಲ್ಲಿ ವಾದವಾದರೆ ಸಾಮಾಜಿಕ ಲಿಂಗ ಎಂಬುದು ಸಾಮಾಜಿಕ ಸೃಷ್ಟಿ ಮತ್ತು ಅದನ್ನು ಬದಲಿಸುವದು ಈವರೆಗಿನ ಯಾವುದೇ ಸಮಾಜಕ್ಕೆ ತೊಡೆದು ಹಾಕಲು ಸಾಧ್ಯವಿಲ್ಲ ಎಂದ ಮಾತ್ರಕ್ಕೆ ನಾವು ಗತಕಾಲದಲ್ಲಿ ಇರುವದು ಎಲ್ಲವೂ ಸರಿಯಾಗಿ ಇರಬೇಕೆಂದುದು ಸರಿಯಲ್ಲ.

**ಆಧಾರ ಗ್ರಂಥಗಳು**


* ಸಮಗ್ರ ಸಮಾಜಶಾಸ್ತ್ರ: ಜೆ.ಆರ್ ಸತ್ಯಲಿಂಗರಾಜು, ಪುಟ ಸಂಖ್ಯೆ: 320–321
* ಸಮಗ್ರ ಸಮಾಜಶಾಸ್ತ್ರ: ರಾಮಚಂದ್ರ ಜೋಷಿ, ಪುಟ ಸಂಖ್ಯೆ : 638–641
* ಸಮಗ್ರ ಸಮಾಜಶಾಸ್ತ್ರ: ಪ್ರೋ. ಕೆ. ಬೈರಪ್ಪ, ಪುಟ ಸಂಖ್ಯೆ: 459–462
* ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ–ಒಂದು ಪ್ರವೇಶಿಕೆ: ಡಾ.ಡಿ. ಮಂಗಳಾ ಪ್ರಿಯದರ್ಶಿನಿ, ಪುಟ ಸಂಖ್ಯೆ: 126–130


Principal V. M. Arts and Commerce Women's College, ILKAL-587125


1. ಸಂಶೋಧನಾ ವಿದ್ಯಾರ್ಥಿನಿ, ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
2. ಮಾರ್ಗದರ್ಶಕರು, ಸಮಾಜಶಾಸ್ತ್ರ ವಿಭಾಗ, ಎಸ್.ವಿ.ಎಮ್. ಮಹಾವಿದ್ಯಾಲಯ, ಸಪ್ರದ. ಕಾಲೇಜು, ಇಲಕಲ್